# ದಿವ್ಯತ್ರಯರ ಸಂದೇಶಗಳಿಂದ ನನ್ನ ಜೀವನದ ಮೇಲೆ ಆಗಿರುವ ಪ್ರಭಾವ

ಕೆ. ರಾಮಚಂದ್ರ
ಬೆಂಗಳೂರು

**ಬ್ಯಾಂ**ಕಿನ ಉದ್ಯಮಿಯಾದ ನನಗೆ ಆಧ್ಯಾತ್ಮಿಕ ಚಿಂತನೆಗಾಗಲಿ, ಅದಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದುವುದಾಗಲಿ ಸಾಧ್ಯವೇ ಇರುತ್ತಿರಲಿಲ್ಲ. ಮನೆಯಲ್ಲಿ ಯಾರಾದರೂ ಆಧ್ಯಾತ್ಮಿಕ ಪುಸ್ತಕಗಳನ್ನು ಓದುವುದನ್ನು ಕಂಡರೂ ನನಗಾಗುತ್ತಿರಲಿಲ್ಲ. ಸಾಧ್ಯವಾದಷ್ಟೂ ಆಧ್ಯಾತ್ಮಿಕ ಭಾವನೆಗಳಿಂದ ದೂರವಿರಬೇಕೆಂದೇ ನಾನು ಮನೆಯವರಿಗೂ ಎಚ್ಚರಿಸುತ್ತಿದ್ದೆ. ಅದು ವ್ಯರ್ಥ ಕಾಲಕ್ಷೇಪವೆಂದೇ ನನ್ನ ಭಾವನೆಯಾಗಿತ್ತು. ಅಂಥ ಪುಸ್ತಕಗಳನ್ನು ಓದಿ ಹೊತ್ತು ಕಳೆಯುವುದಕ್ಕಿಂತ ವೈಚಾರಿಕ ಗ್ರಂಥಗಳನ್ನೋದಿ ಜ್ಞಾನಾರ್ಜನೆ ಮಾಡಿಕೊಳ್ಳುವುದೇ ಉತ್ತಮವೆಂದು ಮಕ್ಕಳಿಗೆ ಹೇಳುತ್ತಿದ್ದೆ. ಕರ್ತವ್ಯವೊಂದನ್ನೇ ದೃಢವಾಗಿ ನಂಬಿ, ಅದರಲ್ಲಿಯೇ ಹೆಚ್ಚು ಹೆಚ್ಚು ನಿಷ್ಠೆ ತೋರಿಸಬೇಕೆಂದೇ ಎಲ್ಲರಿಗೂ ಹೇಳುತ್ತಿದ್ದೆ. ನಮ್ಮ ನಡತೆಗೇ ಹೆಚ್ಚು ಮಾನ್ಯತೆ ನೀಡಬೇಕೆಂಬುದೇ ನನ್ನ ಮನೋಭಾವನೆಯಾಗಿತ್ತು.

ದೈವೀ ಭಾವನೆಗಳೇನೆಂಬುದೂ ನನಗೆ ತಿಳಿದಿರಲಿಲ್ಲ. ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದೆಂದರೆ ನನಗಾಗುತ್ತಿರಲಿಲ್ಲ. ಅದು ಹೊತ್ತು ಹೋಗದವರ ವಾದವೆಂದೇ ಅವರೆಲ್ಲರನ್ನೂ ಹಳಿಯುತ್ತಿದ್ದೆ.

ಶ್ರೀರಾಮಕೃಷ್ಣರ ಬಗ್ಗೆ ಚೆನ್ನಾಗಿ ಓದಿ ತಿಳಿದಿದ್ದರೂ ನಮ್ಮ ತಾಯಿ, ಅವರ ಬಗ್ಗೆ ಹೆಚ್ಚು ಶ್ರದ್ಧೆ ಭಕ್ತಿಗಳನ್ನು ಬೆಳಸಿಕೊಳ್ಳುವಂತೆಯೇ ನಮ್ಮನ್ನು ಬೆಳೆಸಿದ್ದರೂ, ನನಗೆ ಆ ಬಗ್ಗೆ ಹೆಚ್ಚು ಆಸಕ್ತಿ ಏನೂ ಇರಲಿಲ್ಲ. ಅವರ ಬಗ್ಗೆ ಒಂದೆರಡು ಪುಸ್ತಕಗಳನ್ನು ಓದಿದ್ದರೂ ಅದನ್ನು ಮನನ ಮಾಡಿಕೊಳ್ಳುವಷ್ಟು ನನಗೆ ಚಿತ್ತಶುದ್ಧಿಯಿರಲಿಲ್ಲ.

ಕೆಲಸಕ್ಕೆ ಸೇರಿದ ಮೇಲೆ ನನ್ನದೇ ಆದ ಪ್ರಪಂಚದಲ್ಲಿ, ನನ್ನ ಧ್ಯೇಯಗಳಂತೆಯೆ ನಡೆಯಬೇಕೆಂದು ಶ್ರೀಮತಿಗೂ ಮಕ್ಕಳಿಗೂ ಆಣತಿ ಮಾಡಿದ್ದೆ. ಬದುಕು ನೀರಸವೆಂದು ಮನೆಯವರು ಗೊಣಗುತ್ತಿದ್ದರೂ, ತಮ್ಮ ಸ್ವಾತಂತ್ರ್ಯವನ್ನು ಬಯಸುತ್ತಿದ್ದರೂ ಯಾಂತ್ರಿಕ ಭಾವನೆಗಳನ್ನೇ ನಾನು ಪೋಷಿಸುತ್ತಿದ್ದೆ.

ಕೆಲಸದ ಒತ್ತಡದಿಂದ ಒಮ್ಮೆ ನನಗೂ ಅನಾರೋಗ್ಯವುಂಟಾಯಿತು. ಹೆಚ್ಚು ಶ್ರಮವಹಿಸುವುದು ಇನ್ನು ಮೇಲೆ ನಿಮಗೆ ಒಗ್ಗದು ಎಂದು ವೈದ್ಯರು ಸಲಹೆ ನೀಡಿದರು. ತೂಕ ಕಡಿಮೆ ಮಾಡಿಕೊಳ್ಳಲು ಮುಂಜಾವಿನ 'ವಾಕಿಂಗ್' ಒಳ್ಳೆಯದೆಂದೂ ಹೇಳಿದರು, ರಕ್ತದ ಒತ್ತಡ ಅದರಿಂದ ಚೆನ್ನಾಗಿ ನಿಯಂತ್ರಣಕ್ಕೆ ಬರುತ್ತದೆಂದೂ ತಿಳಿದಿದ್ದೆನಾದ್ದರಿಂದ ಅದಕ್ಕೆ ನಾನು ಒಪ್ಪಿಕೊಂಡೆ.

ಮಾರನೆಯ ದಿನದಿಂದಲೆ 'ವಾಕಿಂಗ್' ಪ್ರಾರಂಭಿಸುವುದೆಂದು ನಿರ್ಧಾರವಾಯ್ತು. ಆಗ ಸೂಕ್ತ ಸಲಹೆ ನೀಡಿದವಳು ನನ್ನ ಶ್ರೀಮತಿ. "ಹೇಗೂ ಬೆಳಗಿನ ವಾಕಿಂಗ್‌ಗೆ ಒಪ್ಪಿಕೊಂಡಿರಿ. ಇಲ್ಲಿಂದ ಸೀದಾ ರಾಮಕೃಷ್ಣ ಆಶ್ರಮಕ್ಕೆ ಹೋಗಿ ಅಲ್ಲಿ ಗುರು ಮಹಾರಾಜರಿಗೂ ಶ್ರೀಮಾತೆಯವರಿಗೂ ನಮಸ್ಕರಿಸಿ, ಒಂದೆರಡು ನಿಮಿಷ ಧ್ಯಾನದಲ್ಲಿ ಮನಸ್ಸಿಟ್ಟರೆ ನಿಜಕ್ಕೂ ಮನಃಶಾಂತಿ ಸಿಗುತ್ತದೆ. ಎಂಥ ರಕ್ತದೊತ್ತಡವೂ ನಿಯಂತ್ರಣಕ್ಕೆ ಬರುತ್ತದೆ" ಎಂದಳು. "ಅಷ್ಟೆಲ್ಲಾ ವ್ಯವಧಾನವಿಲ್ಲ! ಬೇಕಾದರೆ ಅಲ್ಲೆಲ್ಲಾ ಸುತ್ತಾಡಿ ಬರಬಹುದು" ಎಂದೆ. ಜತೆಯಲ್ಲಿ ಅವಳೂ ಹೊರಟು ನಿಂತಳು. ಆದ್ದರಿಂದ, ಮಾರನೆದಿನ ಅವಳು ಹೇಳಿದಂತೆಯೇ ಮಾಡಬೇಕಾಗಿ ಬಂತು.

ಪ್ರಾತಃಕಾಲದ ಆ ನಡಿಗೆ, ಆ ತಂಪು ಹವೆ, ಆಶ್ರಮದ ಪ್ರಶಾಂತತೆ ಮನಸ್ಸಿಗೆ ಹಿತವೆನ್ನಿಸಿತು. ಅಲ್ಲಿಯೇ ಸ್ವಲ್ಪ ಹೊತ್ತು ಕುಳಿತು ಹೋಗೋಣವೆಂದ ನನ್ನವಳ ಮಾತಿಗೂ ನಾನು ಗಮನ ಕೊಡಲಿಲ್ಲ. ಆಶ್ರಮದಲ್ಲೇ ಕುಳಿತರೆ ಬ್ಯಾಂಕನ್ನು ಮರೆತು ಇಲ್ಲಿಯೇ ಶಾಶ್ವತವಾಗಿರಬೇಕಾಗುತ್ತದೆಂದು ಹೇಳಿ, ಕೋಪಿಸಿಕೊಂಡು ಅಲ್ಲಿಂದ ಹೊರಬಂದೆ.

ಹೊರಗೆ ಬಂದಾಗ ಬೆಳಗಿನ ನೈರ್ಮಲ್ಯದ ಕೆಲಸಕ್ಕೆಂದು ಗುಂಪು ಸೇರಿದ್ದ ಜಾಡಮಾಲಿಗಳ ದಂಡನ್ನು ಕಂಡು ತುಂಬಾ ಅಸಹ್ಯವೆನ್ನಿಸಿತು. ಕೈಯಲ್ಲಿ ಬುಟ್ಟಿ, ಕಂಕುಳಲ್ಲಿ ಪೊರಕೆ, ಕೊಳಕಲು ಸಮವಸ್ತ್ರ ಧರಿಸಿದವರನ್ನೊಮ್ಮೆ ನೋಡಿದೆ. ತುಂಬಾ ಜುಗುಪ್ಸೆಯಾಯಿತು. ಆ ಪೈಕಿ ಹುರಿ ಮೀಸೆಯ ಕೆಂಗಣ್ಣಿನವನ ಮುಖ ಎಲ್ಲಿ ಹೋದರೂ ಎತ್ತ ನೋಡಿದರೂ, ಕಣ್ಣಿಗೆ ಕಟ್ಟಿದಂತಾಯಿತು.

ಮಾರನೆಯ ದಿನದಿಂದ ಆದಷ್ಟೂ ಆ ಜಾಡಮಾಲಿಗಳು ಕಣ್ಣಿಗೆ ಬೀಳದಂತೆ, ತಪ್ಪಿಸಿಕೊಂಡು ಬರಲಾರಂಭಿಸಿದೆ. ಎಲ್ಲಿ ಅವರ ಪೊರಕೆ ತಗಲುವುದೋ ಎಂಬ ಭಯ. ಆಶ್ರಮದ ಸುತ್ತಾಟವನ್ನೂ ಚುರುಕಾಗಿಯೇ ಮುಗಿಸಿಕೊಂಡು ಬೇಗ ಬೇಗ ಹಿಂತಿರುಗುತ್ತಿದ್ದೆ. ಒಂದು ದಿನ ಇದೇ ಮಾನಸಿಕ ತುಮುಲದಲ್ಲಿ ಆಶ್ರಮದ ಸುತ್ತಾಟವನ್ನೂ ಮುಗಿಸಿಕೊಂಡು ಹೊರಬಂದೆ. ಜಾಡಮಾಲಿಗಳು ಕಾಣಿಸಿದರು. ಮತ್ತೆ ಅದೇ ಭಯದಲ್ಲಿ ನಡಿಗೆ ಚುರುಕುಗೊಳಿಸಿದೆ. ಅದೇ ಹುರಿ ಮೀಸೆಯವನ ಚಿತ್ರ ಕಣ್ಣಮುಂದೆ ಬಂತು. ಬೇಗ ಬೇಗ ರಸ್ತೆಗಿಳಿದೆ. ಯಾವುದೋ ದೊಡ್ಡ ವಾಹನವೊಂದು ವೇಗವಾಗಿ ಬರುತ್ತಿರುವಂತೆ ಶಬ್ದ ಕೇಳಿಸಿತು. ಹಿಂದಿನಿಂದ ಯಾರೋ 'ಸಾರ್, ಸಾರ್' ಎಂದಂತಾ

ಯಿತು. ತಿರುಗಿ ನೋಡದೆ ಹೆಜ್ಜೆ ತೀವ್ರಗೊಳಿಸಿದೆ. ಗಾಬರಿಗೊಂಡಿದ್ದ ನನ್ನ ಮನಸ್ಸು, ಬೆವರುತ್ತಿದ್ದ ಶರೀರ, ಕತ್ತಲು ಕವಿದ ಕಣ್ಣುಗಳು– ನನ್ನ ಪರಿಸ್ಥಿತಿಯನ್ನು ವಿವರಿಸಲಾರೆ. ಪಂಚೆಗೆ ಏನೋ ಸಿಕ್ಕಿಕೊಂಡು ಎಳೆದಂತಾಯಿತು. ಒಂದೇ ಕ್ಷಣ! ಏನಾಯಿತೆಂದೇ ತಿಳಿಯಲಿಲ್ಲ. ಯಾವುದೊ ಬಲಿಷ್ಠ ಕೈಗಳು ನನ್ನನ್ನು ಫುಟ್‌ಪಾತಿಗೆ ತಳ್ಳಿದವು. ಅಲ್ಲಿಯೇ ಕುಕ್ಕರಿಸಿದೆ. ಮೈಯೆಲ್ಲಾ ಬೆವರಿತು. ಅದೇ ಹುರಿ ಮೀಸೆಯ ಕೆಂಗಣ್ಣಿನ ವ್ಯಕ್ತಿ ತನ್ನ ಕಂಕುಳಲ್ಲಿ ಪೊರಕೆ, ಕೈಯಲ್ಲಿ ಬುಟ್ಟಿ ಹಿಡಿದವನು! **"ಏನ್‌ಸೋಮಿ, ಇವೊತ್ತೇನು ಬೆಳಗ್ಗೇನೆ ಜೀವ ತಕ್ಕೋ ಬೇಕೂಂತ ಬಂದಿದ್ದಿರಾ – ಹಂಗೆಲ್ಲಾ ಆಗಾಕೆ ನಾನ್ ಬಿಡಾಕಿಲ್ಲ. ನಮ್ಮ ಗುರುಮಾರಾಜ್ರು ಅಲ್ಲಿ ಕುಂತು, ನಿಮ್ಗಾಕೆ ನನ್ನನ್ನೆಂಗೆ ಓಡಿಸಿದ್ರು ನೋಡಿ"** ಎಂದು ಹೇಳಿ ತನ್ನ ಕೈಲಿದ್ದ ಬಟ್ಟೆಯಿಂದ ನನ್ನ ಮುಖ ಒರೆಸಿದ. ಆ ವ್ಯಕ್ತಿಯಲ್ಲಿ ಕಾಣಬರುತ್ತಿದ್ದ ಮಾನವೀಯತೆ ನನ್ನಲ್ಲಿ ಸ್ವಲ್ಪವೂ ಇರಲಿಲ್ಲವಲ್ಲ ಎಂಬ ನೆನಪು ಬಂದು ನಾಚಿಕೊಂಡೆ. ಕೆನ್ನೆಗೆ ಹೊಡೆದಂತಾಯ್ತು. ಅವನ ಕಣ್ಣಲ್ಲಿಯೇ ಕಣ್ಣಿಟ್ಟು ನೋಡುತ್ತಾ ಅವನಿಗೆ ಎರಡೂ ಕೈಗಳನ್ನು ಮುಗಿದೆ. ನನ್ನ ಬಾಯಿಂದ ಯಾವ ಮಾತೂ ಬರಲಿಲ್ಲ.

ದೇವರ ಬಗ್ಗೆ ಯಾವ ಭಾವವೂ ಇಲ್ಲದ ನನ್ನನ್ನು ಆ ಜಾಡಮಾಲಿಯ ಮೂಲಕ ರಕ್ಷಿಸಿ ಅದರೊಂದಿಗೆ ನನ್ನಲ್ಲಿದ್ದ ಮಡಿಮೈಲಿಗೆಯ ಭಾವನೆಗಳನ್ನು ಶ್ರೀರಾಮಕೃಷ್ಣರು ಕಿತ್ತೊಗೆದರು. ಮಾನವೀಯತೆಯ ಮುಂದೆ ಮತ್ತೆಲ್ಲ ಆಚರಣೆ ಕ್ಷುದ್ರವಾದುದು ಎಂದು ನನಗೆ ಅವತ್ತು ಗೊತ್ತಾಯಿತು. ಗುರುಮಹಾರಾಜರು ನಿಜಕ್ಕೂ ಅವತಾರ ಪುರುಷರೆಂದು ನಾನು ಆ ಕ್ಷಣದಲ್ಲಿ ಮನಗಂಡೆ. ಅಂದಿನಿಂದ ನಾನು ಅವರ ಅನನ್ಯ ಭಕ್ತನಾಗಿದ್ದೇನೆ. ಆಶ್ರಮದ ಎಲ್ಲ ಕಾರ್ಯಕ್ರಮಗಳಲ್ಲೂ ಪಾಲ್ಗೊಳ್ಳುತ್ತಿದ್ದೇನೆ. ಅಲ್ಲಿರುವ ಪುಸ್ತಕಗಳನ್ನು ಓದುತ್ತ ಕಾಲದ ಸದ್ವಿನಿಯೋಗ ಮಾಡುತ್ತಿದ್ದೇನೆ.

ಅಂದಿನಿಂದ ದಾರಿಯಲ್ಲಿ ಗುಂಪುಗೂಡಿ ಕುಳಿತಿರುವ ಜಾಡಮಾಲಿಗಳನ್ನೂ ಪ್ರೀತಿಯಿಂದ ಮಾತಾಡಿಸುತ್ತೇನೆ. ಯಾವ ಅಸಹ್ಯದ ಭಾವನೆಯೂ ಈಗ ಇಲ್ಲ. ಅವರುಗಳೂ ನನ್ನನ್ನು ತುಂಬಾ ಪ್ರೀತಿಯಿಂದ ಮಾತಾಡಿಸುತ್ತಾರೆ. ನನ್ನಲ್ಲೀಗ ಯಾವ ತುಮುಲವೂ ಇಲ್ಲ, ಮನಸ್ಸು ತುಂಬಾ ಪ್ರಶಾಂತವಾಗಿದೆ. ನನ್ನ ವ್ಯಕ್ತಿತ್ವದಲ್ಲಿ ಆಗಿರುವ ಈ ಮಹತ್ ಬದಲಾವಣೆಯಿಂದ ನನ್ನಲ್ಲಿ ಹಾಗೂ ಮನೆಯಲ್ಲಿ ಒಂದು ಹೊಸ ವಾತಾವರಣವೇ ನಿರ್ಮಾಣಗೊಂಡಿದೆ. ಇದೆಲ್ಲ ಶ್ರೀರಾಮಕೃಷ್ಣರ ಅದ್ಭುತ ವ್ಯಕ್ತಿತ್ವ ಹಾಗೂ ಭಾವನೆಗಳ ಪ್ರಭಾವವೆಂದೇ ನನ್ನ ದೃಢ ನಂಬಿಕೆ.

### 'ಪ್ರಪಂಚ–ಬಹು ನೋವಿನ ಕನಸು'

ಒಂದು ದಿನ ಸಂಜೆ ವಿಜ್ಞಾನಾನಂದರು ಆಕಾಶದಲ್ಲಿನ ನಕ್ಷತ್ರಗಳನ್ನು ತಮ್ಮ ಭಕ್ತರಿಗೆ ತೋರಿಸುತ್ತ, 'ಅವರೆಲ್ಲ ನನ್ನ ಸ್ನೇಹಿತರು. ಅದೆಷ್ಟು ಸುಂದರವಾಗಿ ಮಿನುಗುತ್ತಿದ್ದಾರೆ!' ಎಂದರು. ಇದಾದ ಸ್ವಲ್ಪಹೊತ್ತಿನಲ್ಲಿ ಭಕ್ತನೊಬ್ಬ ಸ್ವಾಮಿಗಳನ್ನು ಒಂದು ಕಥೆ ಹೇಳುವಂತೆ ಕೋರಿದ. ತಕ್ಷಣ ಅವರು ಲೊಚಗುಟ್ಟುತ್ತ, 'ನಾನೇನು ನಿನ್ನಜ್ಜಿಯೆ?' ಎಂದು, ನಂತರ 'ಹೌದು, ಎಲ್ಲವೂ ಒಂದು ಯಕ್ಷಿಣಿ ಕಥೆಯೇ – ನಿಜವಾಗಿ. ಲೋಕವೆಲ್ಲ ಒಂದು ಭ್ರಮೆ ಎಂದು ನೀನು ಯೋಚಿಸಲು ಸಾಧ್ಯವಾದರೆ, ಅದೆಷ್ಟು ಸುಖವಾಗಿರುತ್ತೀಯೆ! ಅದನ್ನು ಸತ್ಯವೆಂದುಕೊಳ್ಳುವುದರಿಂದಲೇ ಎಲ್ಲ ಕಷ್ಟಗಳೂ ಹುಟ್ಟುವುದು' ಎಂದರು. ಇದಕ್ಕೆ ಸಂಬಂಧಪಟ್ಟಂತೆ ಪ್ರಪಂಚವನ್ನು ಒಂದು ಕನಸು ಎಂದು ಭಾವಿಸಿದ್ದ ಡಯೋಜೆನಿಸ್ ಎಂಬ ಗ್ರೀಕ್ ತತ್ತ್ವಜ್ಞನ ಕಥೆ ಹೇಳಿದರು. ಒಂದು ದಿನ ಕೆಲವು ಯುವ ವಿದ್ಯಾರ್ಥಿಗಳು ಅವನ ಕಾಲುಗಳನ್ನು ಕಟ್ಟಿ ರಸ್ತೆಯಲ್ಲಿ ಎಳೆದೊಯ್ದರು. ಅವನ ಶರೀರವೆಲ್ಲ ತರಚುಗಾಯಗಳಿಂದ ತುಂಬಿ ಹೋಯಿತು. ಅನಂತರ ವಿದ್ಯಾರ್ಥಿಗಳು 'ಈಗಲೂ ನೀವು ಪ್ರಪಂಚವನ್ನು ಒಂದು ಕನಸು ಎಂದುಕೊಳ್ಳುವಿರಾ?' ಎಂದು ಕೇಳಿದರು. ಡಯೋಜೆನಿಸ್, **'ಹೌದು, ಪ್ರಪಂಚ ಒಂದು ಕನಸು – ಆದರೆ ಬಹು ನೋವಿನ ಕನಸು'** ಎಂದು ಉತ್ತರವಿತ್ತನು.



### " ಯಾರದು? ಹಿಡಿಯಿರಿ ಅವನನ್ನು! "

೧೯೧೧ರಲ್ಲಿ ಶ್ರೀಮಾತೆಯವರು ಬೇಲೂರು ಮಠಕ್ಕೆ ಭೇಟಿಕೊಟ್ಟಿದ್ದರು. ಬ್ರಹ್ಮಾನಂದರು ಅವರಿಗಾಗಿ ಸೊಗಸಾದ ಸ್ವಾಗತವನ್ನು ಏರ್ಪಡಿಸಿದ್ದರು. ಶ್ರೀಮಾತೆಯವರು ಮಠದ ನೆಲದಲ್ಲಿ ನಿಧಾನವಾಗಿ ನಡೆದು ಬರುವಾಗ ಸಂನ್ಯಾಸಿಗಳೂ ಭಕ್ತರೂ ಸಾಲಾಗಿ ನಿಂತು ಗೌರವವನ್ನು ಸೂಚಿಸಿದರು. ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಯಾರೂ ನುಗ್ಗಿ ಬರಬಾರದೆಂದು ಬ್ರಹ್ಮಾನಂದರ ಕಟ್ಟಾಜ್ಞೆ ಇತ್ತು. ಆದರೆ ಇದ್ದಕ್ಕಿದ್ದಂತೆ ಯಾರೋ ಸಾಲಿನ ಹಿಂದಿನಿಂದ ಬಂದು, ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಗುಂಪಿನಲ್ಲಿ ಕಣ್ಮರೆಯಾದರು. ಇದನ್ನು ನೋಡಿದ ಸ್ವಾಮಿ ಬ್ರಹ್ಮಾನಂದರು ತಮಾಷೆಗಾಗಿ ಹೀಗೆ ಕೂಗಿಕೊಂಡರು: "ಯಾರದು? ಹಿಡಿಯಿರಿ ಅವನನ್ನು!" ಎಂದು. ಹಾಗೆ ಪ್ರಣಾಮ ಮಾಡಿದವರು ಬೇರೆ ಯಾರೂ ಅಲ್ಲ, ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಸುಬೋಧಾನಂದರು. ಅವರ ಮಗುವಿನಂತಹ ಸ್ವಭಾವವನ್ನು ಕಂಡು ಅಲ್ಲಿದ್ದವರೆಲ್ಲರೂ ನಕ್ಕರು.



ಸಾಯುವ ಮುಂಚೆ ಸ್ವಾಮಿ ಸುಬೋಧಾನಂದರು ಹೇಳಿದರು: 'ಶ್ರೀರಾಮಕೃಷ್ಣರ ಕೃಪೆ ನಮ್ಮ ಮಹಾಸಂಘದ ಮೇಲೆ ಯಾವಾಗಲೂ ಇರಲಿ ಎಂಬುದೇ ನನ್ನ ಕೊನೆಯ ಪ್ರಾರ್ಥನೆ.'